ದಿನಾಂಕ 12-09-2018 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

ಪಾಟಿ ಸವಾಲು : ಶ್ರೀ ಹೆಚ್ ಎಂ ಕೆ ವಕೀಲರಿಂದ

ದಾವಾ ಸ್ವತ್ತುಗಳು ನನ್ನ ತಾಯಿಗೆ ಅವರ ತಂದೆಯವರಿಂದ ಬಂದಿರುತ್ತದೆ. ನನ್ನ ತಾಯಿಯ ತಂದೆಯವರ ಹೆಸರು ವಳಿಕಲ್ ನಿಂಗಪ್ಪ ಇರುತ್ತದೆ. ನನ್ನ ತಾಯಿಯವರಿಗೆ ಅವರ ತಂದೆಯವರು ಯಾವ ದಾಖಲಾತಿ ಮೂಲಕ ಆಸ್ತಿಗಳನ್ನು ಬಿಟ್ಟು ಕೊಟ್ಟರು ಎಂದರೆ ನನಗೆ ಗೊತ್ತಿರುವುದಿಲ್ಲ, ಮಗಳಾದ್ದರಿಂದ ಬಿಟ್ಟು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತುಗಳು ನನ್ನ ತಾಯಿಯ ತಂದೆಯವರ ಸ್ವತ್ತುಗಳಲ್ಲಾ ಅವು ಮೂಲತಃ ನನ್ನ ತಾಯಿಯ ತಂದೆಯವರ ತಮ್ಮನಾದ ಭೋಯಾ ಹೊನ್ನೂರಪ್ಪರವರಿಗೆ ಸೇರಿದ ಆಸ್ತಿಗಳು ಎಂದರೆ ಸಾಕ್ಷಿಯು ಅವರಿಗೆ ಮಕ್ಕಳು ಇರದೇ ಇದ್ದುದರಿಂದ ಅವರು ಮತ್ತು ಅವರ ಅಣ್ಣಾ ಸೇರಿ ನನ್ನ ತಾಯಿಗೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತುಗಳು ನನ್ನ ತಾಯಿಯವರಿಗೆ ಸೇರಿದ ಆಸ್ತಿಗಳಾಗಿದ್ದು ಅವುಗಳಲ್ಲಿ ನನ್ನ ತಂದೆಯವರಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿ. ನನ್ನ ತಾಯಿಯವರು ಜೀವಂತ ಇದ್ದಾಗ ಜಮೀನುಗಳನ್ನು ನನ್ನ ಅಣ್ಣನಾದ ಹನುಮಂತಪ್ಪನವರು ಸಾಗುವಳಿ ಮಾಡುತ್ತಿದ್ದರು ಎಂದರೆ ಸರಿ. ಒಂದನೇ ಪ್ರತಿವಾದಿ ಹಾಗೂ ನನ್ನ ತಾಯಿ ತಾಳೂರು ಗ್ರಾಮದವರು ಎಂದರೆ ಸರಿ. ಸದರಿ ಸ್ವತ್ತನ್ನು ಒಂದನೇ ಪ್ರತಿವಾದಿಯು ಸಾಗುವಳಿ ಮಾಡಿಸುತ್ತಿದ್ದರು ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ನಾವೆಲ್ಲರೂ ಕೂಡಿ ಸಾಗುವಳಿ ಮಾಡುತ್ತಿದ್ದೆವು ಎಂದು ನುಡಿಯುತ್ತಾರೆ.

ಮುಂದುವರಿದ ಪಾಟಿ ಸವಾಲಿಗೆ ಸಮಯಾವಕಾಶವನ್ನು ಕೋರಿದ್ದು ಅನುಮತಿಸಿ ಸಮಯ ನೀಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾುತು )

ಓ ಹೇ ಕೇ ಸ ಇದೆ.

ಪ್ರ.ದ.ನ್ಯಾ.ದಂ; ಸಂಡೂರು.